ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಅವಕಾಶ ಕೇಳಿದ್ದು ಅವಕಾಶ ನೀಡಿ ಪಾಟೀಸವಾಲನ್ನು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,**

**(ಸಾಬಪ್ಪ)**
9 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು,

**ದಿಃ- 06.12.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿಸವಾಲು ಃ ಪ್ರತಿವಾದಿ ಪರ ಶ್ರೀ. ಎಂ.ಬಿ ವಕೀಲರಿಂದ ಃ**

ನನ್ನ ತಂದೆ ವಾಸುದೇವನ್ ರವರು ಹೆಚ್.ಎ.ಎಲ್.ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಬಿ.ಇ.ಎಲ್.ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ಬಿ.ಇ.ಎಲ್ ಸಂಸ್ಥೆಯು ಕೇಂದ್ರ ಸರ್ಕಾರದ ಅಧೀನದಲ್ಲಿ ಬರುತ್ತಿತ್ತು ಎಂದರೆ ಸರಿ. ಅವರ ತಿಂಗಳ ವೇತನ ನನಗೆ ಗೊತ್ತಿಲ್ಲ. ನನ್ನ ತಂದೆಯವರು 2011 ನೇ ಇಸವಿಯಲ್ಲಿ ನಿವೃತ್ತಿಯನ್ನು ಹೊಂದಿರುತ್ತಾರೆ. ನನ್ನ ತಂದೆಯವರು ಬಿ.ಇ.ಎಲ್.ನಲ್ಲಿ ಕೆಲಸ ಮಾಡುತ್ತಿದ್ದಾಗ ತಾಯಿಯ ಹೆಸರಿನಲ್ಲಿ ಬಾರ್ ಅಂಡ್ ರೆಸ್ಟೋರೆಂಟಿನ ಲೈಸೆನ್ಸ್ ಇತ್ತು ಎಂದರೆ ಸರಿಯಲ್ಲ. ಅದು ನನ್ನ ತಂದೆಯ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ.

ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ವಾದ ಪತ್ರದ ಸ್ವತ್ತಿನ ಜಿ ತಪಸೀಲಿನ ಆಸ್ತಿಯು 2011 ಕ್ಕಿಂತ ಮೊದಲು ನನ್ನ ತಂದೆಯವರ ಹೆಸರಿನಲ್ಲಿ ಇತ್ತು. ಕ್ಯಾಪ್ಟನ್ ಬಾರ್ ಅಂಡ್ ರೆಸ್ಟೋರೆಂಟ್ ವಾದ ಪತ್ರದ ಸ್ವತ್ತಿನ ಹೆಚ್ ತಪಸೀಲಿನ ಆಸ್ತಿಯು 2011 ಕ್ಕಿಂತ ಮೊದಲು ನನ್ನ ತಾಯಿಯವರ ಹೆಸರಿನಲ್ಲಿ ಇತ್ತು. ನನ್ನ ತಂದೆಯವರು ಬಿ.ಇ.ಎಲ್.ನಲ್ಲಿ ಕೆಲಸ ಮಾಡುವಾಗಲೂ ಸಹ ಅದು ನನ್ನ ತಾಯಿಯವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ವಾದ ಪತ್ರದ ಸ್ವತ್ತಿನ ಜಿ ತಪಸೀಲಿನ ಆಸ್ತಿಯು ಪ್ರಸ್ತುತ ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ನನ್ನ ತಾಯಿಯವರ ಹೆಸರಿನಲ್ಲಿ 2015 ರ ಇಸವಿಯಲ್ಲಿ ವರ್ಗಾವಣೆಯಾಗಿರುತ್ತದೆ. ಆ ಸಂದರ್ಭದಲ್ಲಿ ನಾನು ಕೂಡ ನಿರಪೇಕ್ಷಣಾ ಪತ್ರವನ್ನು ನೀಡಿದ್ದೇನೆಂದರೆ

ಸಾಕ್ಷಿಯು ನಾನು ಅದನ್ನು ನಡೆಸಲು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

*(ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ, ನೀಡಲಾಗಿದೆ.)*

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**